

# ಸರ್ಕಾರ, ಅಧಿಕಾರಿಗಳ ಸಹಕಾರದಿಂದ ಆತ್ಮಸ್ಥೈರ್ಯ ಹೆಚ್ಚಿದೆ

■ ಎ. ಮಂಜು
ಹಾಸನ ಜಿಲ್ಲಾ ಉಸ್ತುವಾರಿ ಸಚಿವ

ವಿಶ್ವದ ಗಮನ ಸೆಳೆಯುತ್ತಿರುವ ಮಹಾಮಸ್ತಾಭಿಷೇಕದ ಸಂಭ್ರಮ. ವೈಭವದ ನಡುವೆ ಜವಾಬ್ದಾರಿ ನಿಭಾಯಿಸಬೇಕಾದ ಒತ್ತಡ. ಹಾಸನ ಜಿಲ್ಲಾ ಉಸ್ತುವಾರಿ ಮಂತ್ರಿ ಎ. ಮಂಜು ಅವರು ಮಸ್ತಕಾಭಿಷೇಕದ ಸಿದ್ಧತೆ, ಜವಾಬ್ದಾರಿ ರೂಪುರೇಷೆಗಳ ಕುರಿತು 'ಸುಧಾ'ದೊಂದಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

★ *ಸಚಿವ ಖಾತೆಯೊಂದಿಗೆ ಜಿಲ್ಲಾ ಉಸ್ತುವಾರಿಯೂ ಆಗಿದ್ದೀರಿ. ಮಹಾಮಸ್ತಕಾಭಿಷೇಕ ದೊಡ್ಡ ಜವಾಬ್ದಾರಿ ಹೇಗೆ ನಿಭಾಯಿಸುತ್ತೀರಾ?*

ಮೊದಲನೆಯದಾಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಆಶೀರ್ವಾದ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪೂರ್ಣ ಸಹಕಾರವಿದೆ. ಜಿಲ್ಲೆಯ ಅಧಿಕಾರಿಗಳು ದಕ್ಷತೆಯಿಂದ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಕಾರದಿಂದ ವಿಜೃಂಭಣೆಯಿಂದ ಮಸ್ತಕಾಭಿಷೇಕ ನೆರವೇರಲಿದೆ ಎನ್ನುವ ಆತ್ಮಸ್ಥೈರ್ಯ ಇದೆ.

★ ಈ ಬಾರಿ ಕೇಂದ್ರ ನೆರವು ನೀಡದಿರಲು ಕಾರಣವೇನು?

ಕಳೆದ ಬಾರಿ ಮಹೋತ್ಸವಕ್ಕೆ ಕೇಂದ್ರ ಸರ್ಕಾರ ರೂ.90 ಕೋಟಿ, ರಾಜ್ಯ ಸರ್ಕಾರ ರೂ.30 ಕೋಟಿ ಅನುದಾನ ನೀಡಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರಕ್ಕೆ ಮೂರು ಪತ್ರ ಬರೆದರು. ನಾನೇ ದೆಹಲಿಗೆ ತೆರಳಿ ಹಣಕಾಸು ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದೆ. ಆದರೂ ನೆರವು ಸಿಗಲಿಲ್ಲ. ಅರುಣ್ ಜೇಟ್ಲಿ ಅವರು ಬಿಡಿಗಾಸನ್ನೂ ಕೊಡಲು ಸಾಧ್ಯವಿಲ್ಲ ಎಂದು ವಾಪಸ್ ಪತ್ರ ಬರೆದರು. ಇದರಿಂದ ಅರ್ಥವಾಗುವುದಿಷ್ಟೆ; ಮಹೋತ್ಸವಕ್ಕೆ ಹಣ ಕೊಡಲು ಕೇಂದ್ರಕ್ಕೆ ಮನಸ್ಸಿಲ್ಲ .

★ ಮಸ್ತಕಾಭಿಷೇಕಕ್ಕೆ ರಾಜ್ಯ ಸರ್ಕಾರದ ಕೊಡುಗೆ ಏನು?

ಬಾಹುಬಲಿ ಮಸ್ತಕಾಭಿಷೇಕದ ಅಂಗವಾಗಿ ಕ್ಷೇತ್ರದಲ್ಲಿ ಮೂಲಸೌಲಭ್ಯ ಕಲ್ಪಿಸಲು ರಾಜ್ಯ ಸರ್ಕಾರ ಒಟ್ಟಾರೆ ರೂ.264 ಕೋಟಿ ನೆರವು ನೀಡಿದೆ. ಮಹೋತ್ಸದ ಸಿದ್ಧತೆಗೆ ರೂ.175 ಕೋಟಿ ಒದಗಿಸಿದೆ. ಇದಲ್ಲದೆ, ಶ್ರವಣಬೆಳಗೊಳ ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿಗೆ ರೂ.89 ಕೋಟಿ ಅನುದಾನ ನೀಡಲಾಗಿದೆ. ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಂಡಿದೆ.

★ *ಭಕ್ತರ ಅವರ ವಾಸ್ತವ್ಯ, ಊಟೋಪಚಾರದ ವ್ಯವಸ್ಥೆ ಹೇಗೆ?*

ಸುಮಾರು ರೂ.75 ಕೋಟಿ ವೆಚ್ಚದಲ್ಲಿ ಬೆಳಗೊಳದಲ್ಲಿ ತಾತ್ಕಾಲಿಕ ನಗರಗಳನ್ನು ನಿರ್ಮಿಸಲಾಗಿದೆ. ತ್ಯಾಗಿನಗರ, ಕಳಸನಗರ, ಸ್ವಯಂ ಸೇವಕ ನಗರ, ಪೊಲೀಸ್ ನಗರ, ಪಂಚಕಲ್ಯಾಣ ನಗರ ಸೇರಿದಂತೆ 12 ನಗರಗಳಲ್ಲಿ 26 ಸಾವಿರ ಜನರ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಲಾಗಿದೆ.

★ *ಮಹೋತ್ಸವದ ವಿಶೇಷತೆಗಳು ಯಾವುವು?*

ಶ್ರವಣಬೆಳಗೊಳಕ್ಕೆ ಸಮೀಪದಲ್ಲಿರುವ ಜನಿವಾರ ಕೆರೆಯಲ್ಲಿ ಜಲಸಾಹಸ ಕ್ರೀಡೆ, ಜೈನ ಬಸದಿಗಳ ಸುತ್ತಾಟಕ್ಕೆ ಬೈಕ್ ಸವಾರಿ ಪರಿಚಯಿಸಲಾಗಿದೆ. ಪ್ರವಾಸಿಗರಿಗೆ ಕಡಿಮೆ ಖರ್ಚಿನಲ್ಲಿ ಪ್ರೇಕ್ಷಣೀಯ ಸ್ಥಳಗಳ ಭೇಟಿಗೆ ಟ್ಯಾಕ್ಸಿ ಸೇವೆ ಬಳಸಿಕೊಳ್ಳಲಾಗಿದೆ. ವಿಂಧ್ಯಗಿರಿ, ಚಂದ್ರಗಿರಿ ಬೆಟ್ಟದ ಸುತ್ತಲಿನ ಪ್ರದೇಶವನ್ನು ಹೆಲಿಕಾಪ್ಟರ್ ಮೂಲಕ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

★ *ಮಹೋತ್ಸವ ಸಂದರ್ಭದ ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಕ್ರಮ?*

ಪ್ಲಾಸ್ಟಿಕ್ ಮುಕ್ತ ಸನ್ನಿವೇಶ ನಿರ್ಮಿಸಲು ನಿರ್ಧರಿಸಲಾಗಿದೆ. ಪ್ಲಾಸ್ಟಿಕ್ ಬಳಸದಂತೆ ವರ್ತಕರು, ತರಕಾರಿ ವ್ಯಾಪಾರಿಗಳು, ಹೋಟೆಲ್ ಮಾಲೀಕರು, ಬೀದಿ ಬದಿ ವ್ಯಾಪಾರಿಗಳಿಗೆ ಜಾಗೃತಿ ಮೂಡಿಸಲಾಗಿದೆ. ಗ್ರಾಮ ಪಂಚಾಯಿತಿಯಿಂದ ಎರಡು ಬಕೆಟ್ಗಳನ್ನು ನೀಡಲಾಗುವುದು, ವಾರದಲ್ಲಿ ಎರಡು ದಿನ ಒಣ ಕಸ ಹಾಗೂ ಐದು ದಿನ ಹಸಿ ಕಸವನ್ನು ಸಂಗ್ರಹಿಸಿ ಕೋರೇನಹಳ್ಳಿ ಬಳಿಯ ಪ್ರದೇಶದಲ್ಲಿ ಸಾವಯವ ಗೊಬ್ಬರವನ್ನಾಗಿ ಮಾಡಿ ರೈತರಿಗೆ ಮಾರಾಟ ಮಾಡಲಾಗುವುದು. ಇದರಿಂದ ಗ್ರಾಮ ಪಂಚಾಯಿತಿಗೆ ಲಾಭ ಬರುವುದರ ಜತೆಗೆ ಪಟ್ಟಣವೂ ಸುಂದರ, ಸ್ವಚ್ಛವಾಗುತ್ತದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ತಾತ್ಕಾಲಿಕ ಶೌಚಾಲಯ ನಿರ್ಮಿಸಲಾಗಿದೆ.

★ *ವಿದ್ಯುತ್ ಸಮಸ್ಯೆ ನಿವಾರಣೆಗೆ ಕೈಗೊಂಡಿರುವ ಕ್ರಮ?*

ಮಹೋತ್ಸವ ವೇಳೆ ವಿದ್ಯುತ್ ಅಡಚಣೆಯ ತೊಂದರೆ ನಿವಾರಿಸಲು ಪಟ್ಟಣದ ಹೊರವಲಯದ ಮಂಜುನಾಥಪುರದ ಬಳಿ 2.10 ಎಕರೆ ಪ್ರದೇಶದಲ್ಲಿ ರೂ. 6.7 ಕೋಟಿ ವೆಚ್ಚದಲ್ಲಿ ಕೆಪಿಟಿಸಿಎಲ್ ಬೃಹತ್ ಕಾಮಗಾರಿ ವಿಭಾಗದಿಂದ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲಾಗಿದೆ. ಹೊಸ ವಿದ್ಯುತ್ ವಿತರಣಾ ಕೇಂದ್ರ 7 ಫೀಡರ್ ಹೊಂದಿದ್ದು, ಹೋಬಳಿಯ 7 ಗ್ರಾಮ ಪಂಚಾಯಿತಿ ವ್ಯಾಪ್ತಿಯ 60 ಕ್ಕೂ ಹೆಚ್ಚು ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಮಾಡಬಹುದಾಗಿದೆ. ಈಗಿರುವ ರಾಚೇನಹಳ್ಳಿ, ಜುಟ್ಟನಹಳ್ಳಿ ಹಾಗೂ ಮಂಜುನಾಥಪುರ ವಿದ್ಯುತ್ ವಿತರಣಾ ಕೇಂದ್ರದಿಂದ ಶ್ರವಣಬೆಳಗೊಳಕ್ಕೆ ವಿದ್ಯುತ್ ಪೂರೈಕೆ ಆಗುವುದರಿಂದ ಪಟ್ಟಣ ಸೇರಿದಂತೆ ಹೋಬಳಿಯ ಎಲ್ಲಾ ಭಾಗಗಳಿಗೂ ಬೇಡಿಕೆ ಅನುಸಾರ ವಿದ್ಯುತ್ ಲಭ್ಯವಾಗಲಿದೆ.

ಮಹೋತ್ಸವ ಸಂದರ್ಭದಲ್ಲಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತದೆ. ವಿಂಧ್ಯಗಿರಿ ಹಾಗೂ ಚಂದ್ರಗಿರಿ ಬೆಟ್ಟಗಳು ಸಹ ವಿದ್ಯುತ್ ದೀಪಗಳಿಂದ ಅಲಂಕೃತಗೊಳ್ಳಲಿವೆ.

★ ಆರೋಗ್ಯ ರಕ್ಷಣೆಗೆ ಕೈಗೊಂಡಿರುವ ವ್ಯವಸ್ಥೆ?

ಪ್ರತಿ ಉಪನಗರಗಳಲ್ಲೂ ಆರೋಗ್ಯ ಕೇಂದ್ರ ಸ್ಥಾಪಿಸಲಾಗಿದೆ. 400 ವೈದ್ಯರನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ. ಅಗತ್ಯ ಸ್ಥಳಗಳಲ್ಲಿ ಕ್ಲಿನಿಕ್ ಗಳ ಸ್ಥಾಪನೆ, ಲ್ಯಾಬ್, ಸರ್ಜಿಕಲ್ ಸಲಕರಣೆಗಳು, ಔಷಧಗಳು ದಾಸ್ತಾನು, ಸಿಬ್ಬಂದಿ, ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ.

★ ಲಕ್ಷಾಂತರ ಜನರು ಪಾಲ್ಗೊಳ್ಳುತ್ತಿರುವ ಉತ್ಸವದಲ್ಲಿ ಪ್ರವಾಸಿಗರು, ಭಕ್ತಾದಿಗಳ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳೇನು?

ಜನರ ಸುರಕ್ಷತೆಗೆ ಮೊದಲ ಆದ್ಯತೆ ನೀಡಲಾಗುವುದು. ಅದಕ್ಕಾಗಿಯೇ ಐದು ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಹೊರ ಜಿಲ್ಲೆಗಳ ಪೊಲೀಸ್ ಸಿಬ್ಬಂದಿ ಕರೆಸಿಕೊಳ್ಳಲಾಗಿದೆ. ಸೂಕ್ಷ್ಮ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಕ್ಷೇತ್ರ ಪ್ರವೇಶಿಸುವ ವಾಹನಗಳನ್ನು ತಪಾಸಣೆ ಮಾಡಿ ಬಿಡಲಾಗುತ್ತದೆ. ಎಲ್ಲಾ ನಗರಗಳಿಗೂ ಪೊಲೀಸ್ ಚೌಕಿ ಹಾಗೂ ಕಂಟ್ರೋಲ್ ರೂಂ ಸಹ ತೆರೆಯಲಾಗಿದೆ. 22 ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಲಾಗಿದೆ. ■